90.	Ullor-11	22	15	4	Eco. & Tech. not feasible
91.	Byon	36	19	6	-do-
92.	Golihole	15	11	2	-do-
93.	Yelzil	7	4	—	-do-
94.	Kollur	15	7	1	-do-
95.	Paduvari (North)	17	9	1	-do-
96.	Horanjal	25	11	6	-do-
97.	Kathodu	78	16	7	
	Total	2,689	1,882	257	

Un-Starred Question No. 630

ರಾಯಚೂರು ಹಟ್ಟಿಗಣಿಯಲ್ಲಿ ಅಕ್ರಮ ನೇಮಕಾತಿ

1092. ಶ್ರೀ ಬಿ. ಹಂಪನ ಗೌಡ (ಸಿಂದನೂರು) : ಮಾನ್ಯ ಗಡಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯ ಹಟ್ಟಿ ಗಣಿಯಲ್ಲಿ ಕಾನೂನು ಬಾಹಿರವಾಗಿ ನೇಮಕಾತಿ ಮಾಡಿರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಟ್ಟಿ ಗಣಿಯಲ್ಲಿ ಕಾನೂನು ಬಾಹಿರವಾಗಿ ನೇಮಕವಾದವರ ಸಂಖ್ಯೆ ಎಷ್ಟು

ಇ) ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಂಡಿರುವುದೇ?

ಈ) ಕ್ರಮ ಕೈಗೊಂಡಿದ್ದರೆ ಕೈಗೊಂಡ ಕ್ರಮ ಕೈಗೊಂಡಿರುವುದೇ?

ಉ) ಕೈಗೊಳ್ಳದೇ ಇದ್ದಲ್ಲಿ ಇದಕ್ಕೆ ಕಾರಣವೇನು?

ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉಬ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಬಸವ ಕಲ್ಯಾಣದಲ್ಲಿರುವ ಐತಿಹಾಸಿಕ ಸ್ಥಳಗಳ ಅಭಿವೃದ್ಧಿಪಡಿಸುವುದು.

983 – ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವ ಕಲ್ಯಾಣದಲ್ಲಿರುವ ಪ್ರಮುಖ ಐತಿಹಾಸಿಕ ಸ್ಥಳಗಳು ಯಾವುವು?

ಆ) ಈ ಸ್ಥಳಗಳನ್ನು ಸರ್ಕಾರದವರು ಅಭಿವೃದ್ಧಿಪಡಿಸಲು ಹಾಕಿಕೊಂಡಿರುವ ಕ್ರಮಗಳಾವುವು?

ಇ) 1990-91 ನೇ ಸಾಲಿನ ಅಭಿವೃದ್ಧಿ ಯೋಜನೆಗಳು ಕಾರ್ಯಾರಂಭವಾಗುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಕೋಟಿ, ಬಸವೇಶ್ವರ ದೇವಸ್ಥಾನ, ಪ್ರಭುದೇವರ ಗದ್ದಿಗೆ, ಪರಶುಕಟ್ಟೆ. ಶ್ರೀಪುರಾಂತಕ ಕೊಳ, ಅಕ್ಕನಾಗಮ್ಮ ಗವಿ, ನೂಲಿಯ ಚೌಡಯ್ಯ ಗವಿ, ಮಹಾಮನೆಸ್ಥಳ, ವಿಜ್ಞಾನೇಶ್ವರ ಗವಿಗಳು.